ನಿರ್ಧಾರ ಮಾಡಿದ್ದೇನೆ. ಅಮ್ಮನ ಮೊಬೈಲಲ್ಲಿ ಅವುಗಳ ಫೋಟೊ ತೆಗೆದುಕೊಳ್ಳಬೇಕು ಎಂದು ನೆನಪು ಮಾಡಿಕೊಂಡು ಹೊರಗೆ ಓಡಿದಳು.

ಅಮ್ಮನ ಮುಂದೆ ನಾಲ್ಕು ನಾಯಿಗಳು ಬಾಲ ಅಲ್ಲಾಡಿಸುತ್ತಾ ನಿಂತಿದ್ದವು. ಅಮ್ಮ ಉದ್ದನೆಯ ಬಿಸ್ಕೇಟ್ ಪೊಟ್ಟಣ ಬಿಚ್ಚಿ ಅವುಗಳ ತಲೆ ಮುಟ್ಟಿ, ಮೈ ಉಜ್ಜುತ್ತಾ ಬಿಸ್ಕೇಟ್ ತಿನ್ನಿಸುತ್ತಿದ್ದಳು. ರಂಜಿತಾಳೂ ನಾಯಿಗಳನ್ನು ಮುಟ್ಟಿ ಪ್ರೀತಿ ಮಾಡಿದಳು. 'ಅಮ್ಮ ಈ ನಾಯಿಗಳ ಫೋಟೊ ತೆಗಿಬೇಕು. ನಾನು ಇವುಗಳನ್ನು ಚಿತ್ರಿಸಬೇಕು ಅಂತ ಇದ್ದೇನೆ' ಅಂದಳು ರಂಜಿತಾ. ಸರಿ ಸರಿ ಎನ್ನುತ್ತಾ ಮೊಬೈಲ್ ಹಿಡಿದು ಫೋಟೊ ತೆಗೆದು ಮೊಬೈಲನ್ನು ರಂಜಿತಾಳಿಗೆ ಕೊಟ್ಟಳು. ಅಮ್ಮ ಎರಡು ಬಿಸ್ಕೇಟ್ ಪೊಟ್ಟಣ ಖಾಲಿ ಮಾಡಿದಾಗ ಹೊಟ್ಟೆ ತುಂಬಿದ ನಾಯಿಗಳು ರಂಜಿತಾಳನ್ನು ಆಟಕ್ಕೆ ಕರೆಯ ತೊಡಗಿದವು. ಅಷ್ಟರಲ್ಲಿ ಕಾಳು ಬೆಕ್ಕು ಮ್ಯಾಂವ್ ಮ್ಯಾಂವ್ ಎನ್ನುತ್ತಾ ಬಂದು ಅಮ್ಮನ ಕಾಲು ಸುತ್ತ ತೊಡಗಿತು. 'ಅಯ್ಯೋ, ಕಾಳು ನಿನಗೆ ಹಾಲು ಅನ್ನ ಹಾಕೋದೇ ಮರೆತಿದ್ದೆ. ಪಾಪ ಹಸಿವಾಗಿದೆ' ಎನ್ನುತ್ತಾ ಅದಕ್ಕೂ ಹಾಲು ಹಾಕಿದ ಅನ್ನ ಕಲಸಿ ಪ್ಲೇಟಿಗೆ ಹಾಕಿದಳು ಅಮ್ಮ. ಅಮ್ಮ ಎಷ್ಟು ಒಳ್ಳೆಯವಳು ನಾಯಿ, ಬೆಕ್ಕುಗಳನ್ನೆಲ್ಲ ಎಷ್ಟು ಪ್ರೀತಿ ಮಾಡುತ್ತಾಳೆ ಎಂದು ಸಂತಸಪಟ್ಟಳು ರಂಜಿತಾ. ಅವಳು ಈಗ ನಾಯಿಗಳ ಹಿಂದೆ ಓಡುತ್ತಾ ಗೇಟು ದಾಟಿ ಹೊರಗೆ ಹೋದಳು.

ರಂಜಿತಾಳ ಮನೆ ಹತ್ತಿರ ಗೆಳೆಯರಾರೂ ಇಲ್ಲ. ಹಾಗಾಗಿ ಅವಳು ನಾಯಿಗಳೊಂದಿಗೆ ಆಗಾಗ ಆಡುತ್ತಿರುತ್ತಾಳೆ. ಸಣ್ಣ ಹಗ್ಗ ಹಿಡಿದು ಓಡಿದರೆ ಚಿನ್ನು ನಾಯಿ ಅದನ್ನು ಕಚ್ಚಿ ಕಚ್ಚಿ ಜಗ್ಗಿ ಆಟ ಆಡುವುದು ರಂಜಿತಾಳಿಗೆ ಮಜವೇ ಮಜಾ. ರಂಜಿತಾ ಹಾಗೆ ಆಟ ಆಡುತ್ತಾ ಮನೆಯ ಪಕ್ಕದ ಬಯಲಿಗೆ ಬಂದಳು. ಅಲ್ಲಿ ಯಾರೋ ಪ್ಲಾಸ್ಟಿಕ್ ಹೊದಿಕೆಯ ಪುಟ್ಟ ಶೆಡ್ ಹಾಕಿಕೊಂಡಿರುವುದು ಕಂಡಿತು. ಅಷ್ಟರಲ್ಲಿ ಸಣ್ಣ ನಾಯಿಯೊಂದು ಆ ಜೋಪಡಿಯಿಂದ ಹೊರಗೆ ಬಂತು. ಅದು ಬೊಗಳಲು ತೊಡಗಿತು. ನಾಯಿಯ ಹಿಂದಿನಿಂದಲೇ ರಂಜಿತಾಳಷ್ಟೇ ದೊಡ್ಡ ಹುಡುಗಿಯೊಬ್ಬಳು ಹೊರಗೆ ಬಂದಳು. ಅವಳು ಆ ನಾಯಿಯನ್ನು ಹಚ್ಚ ಹಚ್ಚ ಎಂದು ಬೈಯ್ದು ಒಳಗೆ ಕಳಿಸಿದಳು. ರಂಜಿತಾ ಆ ಹುಡುಗಿಯತ್ತ ಪ್ರೀತಿಯ ನೋಟ ಬೀರಿ ಮುಗುಳು ನಕ್ಕಳು. ಅವಳೂ ನಗೆಯಾಡಿದಾಗ ರಂಜಿತಾಳಿಗೆ ತುಂಬಾ ಆನಂದ ಆಯಿತು.

ಆ ದಿನ ರಂಜಿತಾಳಿಗೆ ನಾಯಿಗಳ ಚಿತ್ರ ಬಿಡಿಸಿ ಮುಗಿಯಲಿಲ್ಲ. ಮರುದಿನ ಮುಂಜಾನೆ ತಿಂಡಿ ತಿಂದು ಚಿತ್ರ ಬಿಡಿಸಲು ಕುಳಿತಳು. ಅಂತೂ ಚಿತ್ರ ಮುಗಿಯಿತು. ಚಿತ್ರವನ್ನು ಮತ್ತೆ ಮತ್ತೆ ನೋಡಿ ಖುಷಿ ಪಟ್ಟಳು.

ಈ ದಿನ ಯಾರಾದರೂ ಆಡಲು ಬೇಕಿತ್ತು ಅನಿಸಿ ಹೊರಗೆ ನಡೆದಳು. ಬಯಲಿನ ಹತ್ತಿರ ಹೋದಾಗ ಅದೇ ನಿನ್ನೆ ಕಂಡ ಹುಡುಗಿ ಅಲ್ಲಿಯೇ ಇದ್ದಳು. ರಂಜಿತಾ ಅವಳ ಹತ್ತಿರ ಹೋದಳು. ಇಬ್ಬರೂ ಪರಿಚಿತರಾದರು. ಆ ಹುಡುಗಿಯ ಹೆಸರು ಲಿಲ್ಲಿ. ರಂಜಿತಾ ಮನೆಗೆ ಓಡಿ ಹೋಗಿ ರಬ್ಬರ್ ಬಾಲ್ ಒಂದನ್ನು ತೆಗೆದುಕೊಂಡು ಬಂದಳು. ಅವರಿಬ್ಬರೂ ಎಷ್ಟೋ ಹೊತ್ತು ಆಡುತ್ತಲೇ ಇದ್ದರು. ರಂಜಿತಾಳಿಗೆ ಲಿಲ್ಲಿ ಒಳ್ಳೆಯ ಗೆಳತಿಯಾದಳು. ಆ ಬಯಲು ಅವರ ಆಟದ ಮೈದಾನವಾಗಿ ಮೂರು ದಿನ ಕಳೆದು ಹೋಯಿತು.

ಲಿಲ್ಲಿ, 'ನಾನು ನಾಳೆ ಬೇರೆ ಊರಿಗೆ ಹೋಗುವೆ' ಎಂದಾಗ... ರಂಜಿತಾಳಿಗೆ ಬೇಜಾರಾಯಿತು. ಲಿಲ್ಲಿಗೆ ನಾನು ಏನಾದರೂ ತಿನ್ನಲು ಕೊಡಬೇಕು ಅನಿಸಿತು.

ರಂಜಿತಾ ಅವಳ ಕೈ ಹಿಡಿದು ತನ್ನ ಮನೆಯ ಕಡೆಗೆ ಕರೆದುಕೊಂಡು ಹೋದಳು. ಲಿಲ್ಲಿಯನ್ನು ಮನೆಯ ಹೊರಗೆ ನಿಲ್ಲಿಸಿ ಒಳಗೆ ಹೋಗಿ ಒಂದು ಬಿಸ್ಕೇಟ್ ಪೊಟ್ಟಣ ತಂದಳು. ಅದನ್ನು ಪ್ರೀತಿಯಿಂದ ಲಿಲ್ಲಿಗೆ ಕೊಟ್ಟಳು.

ಅಷ್ಟರಲ್ಲಿ 'ಅವಳಿಗೇಕೆ ಬಿಸ್ಕೇಟ್ ಕೊಟ್ಟೆ, ಯಾರು ಯಾರನ್ನೋ ಕರೆದುಕೊಂಡು ಬಂದು ದಾನ ಮಾಡೋದಾ? ಅವರೆಲ್ಲ ಊರು ಊರು ತಿರುಗೋ ಜನ. ಅಪ್ಪ ನಿನಗೆ ಅಂತ ತಂದ ವಿಶೇಷ ರುಚಿಯ ಬಿಸ್ಕೇಟ್ ಅದು. ಆಟ ಆಡಿಕೊಳ್ಳಲಿ ಅಂತ ಬಿಟ್ರೆ ಮನೆಗೂ ಕರೆದುಕೊಂಡು ಬಂದುಬಿಟ್ಟೆ...' ಎಂದೆಲ್ಲಾ ಹೇಳುತ್ತಾ ಆ ಬಿಸ್ಕೇಟ್ ಅವಳಿಗೆ ಕೊಡಬೇಡ ಎಂದು ದೊಡ್ಡದಾಗಿ ಬೈಯ್ಯತೊಡಗಿದಳು ಅಮ್ಮ. ಲಿಲ್ಲಿ ತನಗೆ ಕೊಟ್ಟಿದ್ದ ಬಿಸ್ಕೇಟ್ ಪೊಟ್ಟಣ ಹಿಂದಿರುಗಿಸಲು ಕೈ ಚಾಚಿದ್ದರೆ... ಅಮ್ಮ ಏಕೆ ಹೀಗೆ ಮಾಡುತ್ತಿದ್ದಾಳೆ ಎಂದು ತಿಳಿಯದೆ ರಂಜಿತಾ ಅಮ್ಮನ ಮುಖವನ್ನೇ ನೋಡುತ್ತಾ ನಿಂತಿದ್ದಳು. ●